ಪ್ರೋತ್ಸಾಹವನ್ನು ಕೊಡುವುದಕ್ಕೋಸ್ಕರ ಈ ಮಕ್ಕಳಿಗೆ admission ನಲ್ಲಿ marks ಕೊಡುತ್ತೀರಾ?

ಶ್ರೀ ಕೃಷ್ಣ ಬೈರೇಗೌಡ:– ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಗ್ರಾಮೀಣ ಪ್ರದೇಶದಲ್ಲಿರುವ ಕೃಷಿಕರ ಮಕ್ಕಳಿಗೆ ಪ್ರವೇಶಾತಿಯಲ್ಲಿ 23.8% ಮೀಸಲಾತಿಯನ್ನು ಇಟ್ಟಿದ್ದೇವೆ.

ಶ್ರೀ ಕೆ. ಶಿವಮೂರ್ತಿ:– ನಾನು ಕೇಳುತ್ತಿರುವುದು ಮೀಸಲಾತಿಯಲ್ಲ; ಮಕ್ಕಳಿಗೆ ಪ್ರೋತ್ಸಾಹ ನೀಡುವ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಕೃಷ್ಣ ಬೈರೇಗೌಡ:– ಇದು ಕೂಡ ಪ್ರೋತ್ಸಾಹವೇ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಿಶೇಷವಾಗಿ ಪ್ರತ್ಯೇಕ ಅಂಕವನ್ನು ಇಟ್ಟು ಅದಕ್ಕೆ ಪರೀಕ್ಷೆಯನ್ನು ಸಹ ಮಾಡುತ್ತೇವೆ. ಇದರಲ್ಲಿ ಹಳ್ಳಿ ಮಕ್ಕಳು ಮಾತ್ರ eligible ಇರುತ್ತಾರೆ. ಈಗಾಗಲೇ ಹಳ್ಳಿ ಮಕ್ಕಳಿಗೆ ಎಂದರೆ ಕೃಷಿ ಮಕ್ಕಳಿಗೆ ವಿಶೇಷವಾದ ಪ್ರೋತ್ಸಾಹವನ್ನು 23.8% ಪ್ರವೇಶಾತಿಯಲ್ಲಿ ಇಟ್ಟುಕೊಂಡಿದ್ದೇವೆ.

ಶ್ರೀ ಬಿ.ಆರ್. ಪಾಟೀಲ್:– ಕೃಷಿ ಕಾಲೇಜನ್ನು ತೆರೆಯುವ ಬಗ್ಗೆ ಹೊಸದಾಗಿ ಚಿಂತನೆ ಮಾಡಿ.

ಬೆಂಗಳೂರು–ದೊಡ್ಡಬಳ್ಳಾಪುರ–ಹಿಂದೂಪುರ ಹೆದ್ದಾರಿ

19(96); ಶ್ರೀ ವಿಶ್ವನಾಥ ಎಸ್.ಆರ್. (ಯಲಹಂಕ)

ಅ) ಬೆಂಗಳೂರಿನಿಂದ ಯಲಹಂಕ ಮಾರ್ಗವಾಗಿ ದೊಡ್ಡಬಳ್ಳಾಪುರ–ಹಿಂದೂಮರ ಮಾರ್ಗದ ರಾಜ್ಯದ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಂಜೂರು ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಾಜ್ಯ ಹೆದ್ದಾರಿಯನ್ನು ಹಸ್ತಾಂತರಿಸಲಾಗಿದೆಯೇ; ಈ ರಸ್ತೆಯನ್ನು ಅಭಿವೃದ್ಧಿಪಡಿಸುವ ವಿಚಾರ ಯಾವ ಹಂತದಲ್ಲಿದೆ;

ಇ) ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು;

ಈ) ಇದರ ಅಂದಾಜು ವೆಚ್ಚ ಎಷ್ಟು; ಯಾವ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿಕೊಡಲಾಗಿದೆ (ಪೂರ್ಣ ಮಾಹಿತಿ ಒದಗಿಸುವುದು)?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಇಲ್ಲ

ಆ) ಹಸ್ತಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ ರಸ್ತೆಯನ್ನು K.R.D.C.L. ವತಿಯಿಂದ PPP ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಟೆಂಡರ್ ಕರೆಯಲಾಗಿದೆ.

ಇ) ಕಾಮಗಾರಿಯ 2ನೇ ಕರೆಯ RFP ಯ ಕೊನೆಯ ದಿನಾಂಕ 31–01–2014 ಆಗಿರುತ್ತದೆ. ಟೆಂಡರ್ ಪ್ರಕ್ರಿಯೆ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಈ) K.R.D.C.L. ವತಿಯಿಂದ PPP ಅಡಿಯಲ್ಲಿ ಉದ್ದೇಶಿಸಿರುವ ಈ ರಸ್ತೆಯ ಅಂದಾಜು ಮೊತ್ತ ₹ 380.85 ಕೋಟಿಗಳಾಗಿರುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿದೆ.

ಶ್ರೀ ವಿಶ್ವನಾಥ ಎಸ್.ಆರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಯಲಹಂಕ–ಹಿಂದೂಪುರ ರಸ್ತೆ ಎರಡು ಪಥದ ಅಗಲ ಕಡಿಮೆಯಿರುವ ರಸ್ತೆಯಾಗಿದೆ. ನಾಲ್ಕು ತಿಂಗಳ ಹಿಂದೆ ಇದೇ ಪ್ರಶ್ನೆಯನ್ನು ಸದನದಲ್ಲಿ ಕೇಳಿದ್ದಾಗ ಕೂಡ ಇದೇ ಉತ್ತರವನ್ನು ಕೊಟ್ಟಿದ್ದರು. ಆದರೆ ಇಲ್ಲಿಯವರೆಗೆ ಕಾಮಗಾರಿಯನ್ನು ಪ್ರಾರಂಭ ಮಾಡಿಲ್ಲ. ಇಂದು ನಾನು ಸದನಕ್ಕೆ ತಡವಾಗಿ ಬರುವುದಕ್ಕೆ ಕಾರಣವೇ ವಿಪರೀತವಾಗಿ ಟ್ರ್ಯಾಫಿಕ್ ಜಾಮ್ ಆಗಿರುವುದು ಮತ್ತು ಈ ರಸ್ತೆ ಅಗಲವಾಗದಿರುವುದೇ ಆಗಿದೆ. ಇದನ್ನು KRDCL ರವರು ತೆಗೆದುಕೊಂಡು ನಾಲ್ಕು ಪಥದ ರಸ್ತೆ ಮಾಡುವಲ್ಲಿ ಜಾಗದ ವಿಸ್ತರಣೆ ಮಾಡುವುದಕ್ಕೆ ಯಾವುದೇ ತೊಂದರೆಯಿಲ್ಲ. ಹಳ್ಳಿಗಳಲ್ಲಿ ಮಾತ್ರ ಮನೆಗಳನ್ನು ತೆರವು ಮಾಡಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗೆ ಈ

ರಸ್ತೆಯನ್ನು ಕೊಟ್ಟಿದ್ದೇವೆಂದು ಕಳೆದ ಬಾರಿ ಹೇಳಿದ್ದು, ಈ ಬಾರಿ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಈ ರಸ್ತೆಯನ್ನು priority ಮೇಲೆ ಕೈಗೆತ್ತಿಕೊಂಡು ಪ್ರಾರಂಭ ಮಾಡುವುದಕ್ಕೆ ಮಾನ್ಯ ಸಚಿವರು ಕ್ರಮ ಕೈಗೊಳ್ಳಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಇದೊಂದು ಪ್ರಮುಖವಾದ ರಸ್ತೆಯಾಗಿದೆ. PPP ಮಾದರಿಯಲ್ಲಿ interview ಕರೆದಿದ್ದು, ಇದರಲ್ಲಿ ಮೂರು ಜನ ಭಾಗವಹಿಸಿದ್ದಾರೆ. ಜನವರಿ 31st ಈ ತಿಂಗಳ ಕೊನೆಗೆ. ಯಲಹಂಕ–ದೊಡ್ಡಬಳ್ಳಾಪುರ ರಸ್ತೆಯನ್ನು ನಾಲ್ಕು ಪಥ ರಸ್ತೆಯನ್ನಾಗಿ ಮಾಡಬೇಕೆಂದು ತುಂಬಾ ಒತ್ತಡವಿದೆ. ಕರ್ನಾಟಕ ರಾಜ್ಯದಲ್ಲಿ 4,688 ಕಿ.ಮೀ. ರಸ್ತೆಗಳು ಸುಮಾರು 17 ರಾಷ್ಟ್ರೀಯ ಹೆದ್ದಾರಿಗಳಾಗಿವೆ. 20000 State Highway ಇದೆ ಅದರಲ್ಲಿ 157 ನಂಬರ್ ಇದೆ. 37 ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಅದರಲ್ಲಿ ಎರಡು ರಸ್ತೆಗಳನ್ನು ಮಾರ್ಚ್‌ನಲ್ಲಿ ರಾಷ್ಟ್ರೀಯ ಹೆದ್ದಾರಿ ಮಾಡಿದ್ದಾರೆ. ಉಳಿದ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿ ಮಾಡುವ proposal ಇದೆ. KRDCL ನಲ್ಲಿ ಈ ತಿಂಗಳ ಕೊನೆಯವರೆಗೆ proposal ಕೇಳಿದ್ದೇವೆ. ಟೆಂಡರ್ ಹಾಕಿದ್ದು, ಅದನ್ನು ಅಂತಿಮಗೊಳಿಸುತ್ತೇವೆ. ಇದೊಂದು ಪ್ರಮುಖವಾದ ರಸ್ತೆಯಾಗಿರುವುದರಿಂದ ಇದನ್ನು ಖಂಡಿತವಾಗಿ priority ಮೇಲೆ ಕೈಗೆತ್ತಿಕೊಳ್ಳುತ್ತೇವೆ.

DCC ಬ್ಯಾಂಕ್‌ನ ಅಭಿವೃದ್ಧಿಯೋಜನೆಯ ಫಲಾನುಭವಿಗಳ ಪಟ್ಟಿ

10(95); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಿಂದ ಮಧ್ಯಮ ನೀರಾವರಿ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗಿನ ಫಲಾನುಭವಿಗಳ ಪಟ್ಟಿಯನ್ನು, ಸರ್ಕಾರದ ಮಾರ್ಗಸೂಚಿಸಿ, ಫಲಾನುಭವಿಗಳ ಆಯ್ಕೆ ಪಟ್ಟಿ, ಹಣ